**‘ಹಾಲುತುಪ್ಪ’ ಸಿನಿಮಾ ಮೂಲಕ ಕನ್ನಡ ಸಿನಿಮಾರಂಗ ಪ್ರವೇಶಿಸಿ ಹಲವು ಚಿತ್ರಗಳಲ್ಲಿ ಅಭಿನಯಿಸಿರುವ ನಟಿ ಸಂಹಿತಾ ವಿನ್ಯಾ, ತಮಿಳು, ಮಲಯಾಳಂ ಸಿನಿಮಾಗಳತ್ತಲೂ ತಮ್ಮ ವ್ಯಾಪ್ತಿ ವಿಸ್ತರಿಸಿಕೊಂಡಿದ್ದಾರೆ. ಈಚೆಗೆ ಅವರ ಅಭಿನಯದ ‘ಮೆಜೆಸ್ಟಿಕ್ 2’, ‘ಆಯುಧ’ ಸಿನಿಮಾಗಳು ತೆರೆಕಂಡಿದ್ದು, ಮತ್ತಷ್ಟು ಚಿತ್ರಗಳು ಬಿಡುಗಡೆಯ ಸಾಲಿನಲ್ಲಿವೆ. ಇದೇ ನೆಪದೊಂದಿಗೆ ‘ಸುಧಾ’ದೊಂದಿಗೆ ಅವರು ಮಾತಿಗಿಳಿದಿದ್ದಾರೆ.**



# ಸಂಹಿತಾ ಸಿನಿಮಾ ಹಾದಿಯಲ್ಲಿ...

ಮಾಡೆಲಿಂಗ್ ಕ್ಷೇತ್ರದಲ್ಲಿದ್ದ ಸಂಹಿತಾ ವಿನ್ಯಾ, ಕನ್ನಡದ ‘ಹಾಲುತುಪ್ಪ’ ಸಿನಿಮಾ ಮೂಲಕ ನಟಿಯಾಗಬೇಕೆಂಬ ತಮ್ಮ ಕನಸಿನ ಮೊದಲ ಮೆಟ್ಟಿಲು ಏರಿದವರು. 2017ರಿಂದ ಇಲ್ಲಿಯವರೆಗೂ ಹಲವು ಸಿನಿಮಾಗಳಲ್ಲಿ ನಟಿಸಿದ್ದು, ಈಚೆಗೆ ಕನ್ನಡದಲ್ಲಿ ಅವರ ಅಭಿನಯದ ‘ಮೆಜೆಸ್ಟಿಕ್ 2’ ಹಾಗೂ ‘ಆಯುಧ’ ಸಿನಿಮಾಗಳು ತೆರೆಕಂಡಿವೆ.

ಕನ್ನಡದ ಜೊತೆಜೊತೆಗೆ ತಮಿಳು, ಮಲಯಾಳಂ ಸಿನಿಮಾಗಳಲ್ಲಿ ಕೂಡ ಅಭಿನಯಿಸುತ್ತಿದ್ದು, ಈ ಅವಕಾಶಗಳು ತಮ್ಮ ವೃತ್ತಿ ಜೀವನದಲ್ಲಿ ಹೊಸ ದಾರಿಯನ್ನು ತೆರೆಯುವ ವಿಶ್ವಾಸದಲ್ಲಿದ್ದಾರೆ.

“ಈಚೆಗೆ ತೆರೆಕಂಡಿರುವ ‘ಮೆಜೆಸ್ಟಿಕ್ 2’ ಸಿನಿಮಾದಲ್ಲಿ ನನಗೆ ಉತ್ತಮ ಸ್ಕ್ರೀನ್ ಸ್ಪೇಸ್ ಸಿಕ್ಕಿತ್ತು. ಹೊಸ ರೀತಿಯಲ್ಲಿ ಕಾಣಿಸಿಕೊಂಡಿದ್ದೆ. ನನ್ನ ಇತರೆ ಸಿನಿಮಾಗಳಿಗೆ ಹೋಲಿಸಿದರೆ ನನಗೆ ಸಿಕ್ಕ ಪಾತ್ರವೂ ಭಿನ್ನತೆಯಿಂದ ಕೂಡಿತ್ತು” ಎಂದು ವಿವರಿಸುತ್ತಲೇ, ತಮಿಳು ಭಾಷೆಯಲ್ಲಿಯೂ ತಮ್ಮ ಪಾಲಿಗೆ ಉತ್ತಮ ಅವಕಾಶವೊಂದು ಸಿಕ್ಕಿರುವ ಮಾಹಿತಿ ನೀಡಿದ್ದಾರೆ.

ತಮಿಳಿನಲ್ಲಿ ‘ಮಿಕ್ಸಿಂಗ್ ಕಾದಲ್’ ಸಿನಿಮಾದೊಂದಿಗೆ ‘ಹಿಡನ್ ಕ್ಯಾಮೆರಾ’ ಎಂಬ ಹೊಸ ಪ್ರಾಜೆಕ್ಟ್ ಕೂಡ ಅವರಿಗೆ ದೊರೆತಿದ್ದು, ಬೇರೆ ಸಿನಿಮಾರಂಗದಲ್ಲಿ ತಮ್ಮ ಗುರುತು ಮೂಡಿಸಲು ಈ ಚಿತ್ರ ಉತ್ತಮ ಅವಕಾಶವಾಗುವ ನಿರೀಕ್ಷೆ ವ್ಯಕ್ತಪಡಿಸಿದ್ದಾರೆ. ಇದೇ ಸಂದರ್ಭ, ತಮಿಳು–ಮಲಯಾಳಂ ಸಿನಿಮಾರಂಗದ ಅನುಭವಗಳನ್ನೂ ಮೆಲುಕು ಹಾಕಿದ್ದಾರೆ.

‘ಮನೆಗೆ ನೆಂಟರು ಬಂದರೆ ನಾವು ಹೇಗೆ ಸ್ವಾಗತಿಸುತ್ತೇವೋ ಹಾಗೆ ಕನ್ನಡದವರನ್ನು ನೋಡಿಕೊಳ್ಳುತ್ತಾರೆ. ಪೇಮೆಂಟ್ ವಿಷಯದಲ್ಲಿ, ನಮ್ಮನ್ನು ಗೌರವಿಸುವ ರೀತಿ ಎಲ್ಲವೂ ಚೆನ್ನಾಗಿದೆ. ಕನ್ನಡದ ನಟಿಯರು ಬೇರೆ ಸಿನಿಮಾರಂಗಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವುದು ಖುಷಿ ವಿಷಯ. ಕನ್ನಡ ಹುಡುಗಿಯರು ಪ್ರತಿಭಾನ್ವಿತರು ಎಂಬ ನಂಬಿಕೆ ಅಲ್ಲಿನವರಿಗೆ. ಆ ಹೆಮ್ಮೆ ನಮಗೂ ಇದೆ’ ಎಂದು ಸಂತಸ ವ್ಯಕ್ತಪಡಿಸುತ್ತಾರೆ.

ಕನ್ನಡ ಸಿನಿಮಾರಂಗದಲ್ಲಿ ಹಲವು ವರ್ಷಗಳಿಂದ ನಿರಂತರವಾಗಿ ಸಿನಿಮಾಗಳಲ್ಲಿ ತೊಡಗಿಕೊಂಡಿದ್ದರೂ ಅವಕಾಶಗಳ ವಿಷಯದಲ್ಲಿ ತಮಗೆ ಬೇಸರ ಕಾಡುತ್ತಿರುವುದಾಗಿ ಹೇಳುತ್ತಾರೆ ಸಂಹಿತಾ. ಈ ರಂಗದಲ್ಲಿ ತಮ್ಮದೊಂದು ಗುರುತು ಮೂಡಿಸುವುದು ಎಷ್ಟು ಸವಾಲು ಎಂಬುದನ್ನೂ ವಿವರಿಸುತ್ತಾರೆ.

‘ಈಗ ಸಿಕ್ಕಾಪಟ್ಟೆ ಸ್ಪರ್ಧೆ ಇದೆ. ವಾರಕ್ಕೆ ಹತ್ತತ್ತು ಸಿನಿಮಾಗಳು ಬಿಡುಗಡೆಯಾಗುತ್ತವೆ. ರೀಲ್ಸ್ ಬಂದ ನಂತರ ಏನೇನೋ ಬದಲಾವಣೆಗಳಾಗಿವೆ. ಒಳ್ಳೆಯ ಅವಕಾಶಗಳಿಗೆ ಎದುರು ನೋಡುತ್ತಿರುವ ನಮ್ಮಂಥವರಿಗೆ ಇದನ್ನೆಲ್ಲ ನೋಡಿದಾಗ ಸ್ವಲ್ಪ ಬೇಜಾರಾಗುತ್ತೆ. ಆದರೆ ನಾನು ಪ್ರಯತ್ನ ಬಿಟ್ಟಿಲ್ಲ. ನನ್ನನ್ನು ಗುರುತಿಸಿಕೊಳ್ಳಲು ಏನೆಲ್ಲಾ ಮಾಡಬೇಕೋ ಶ್ರಮವಹಿಸಿ ಮಾಡುತ್ತಿದ್ದೇನೆ. ಒಂದಲ್ಲಾ ಒಂದು ದಿನ ನಾನು ನಿರೀಕ್ಷಿಸಿದ್ದು ಸಿಕ್ಕೇ ಸಿಗುವ ನಂಬಿಕೆ ನನಗಿದೆ’ ಎಂದು ಆಶಾಭಾವ ವ್ಯಕ್ತಪಡಿಸುತ್ತಾರೆ.

ಸದ್ಯ ಕನ್ನಡದಲ್ಲಿ ಧರ್ಮ ಕೀರ್ತಿರಾಜ್ ಜೊತೆಗೆ ‘ಸಿಂಧೂರಿ’ ಹಾಗೂ ‘ಸ್ವಾಭಿಮಾನಿ’ ಎಂಬ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಹಿಂದಿ ಗಜಲ್ ಹಾಡೊಂದರಲ್ಲಿಯೂ ಸಂಹಿತಾ ಅಭಿನಯಿಸಿದ್ದಾರೆ. ತಮಿಳಿನ ‘ಮಿಕ್ಸಿಂಗ್ ಕಾದಲ್’ ಬಿಡುಗಡೆಯಾಗುತ್ತಿದ್ದು, ಮತ್ತೊಂದು ತಮಿಳು ಸಿನಿಮಾ ಒಪ್ಪಿಕೊಂಡಿದ್ದಾರೆ. ಮಲಯಾಳಂ ಸಿನಿಮಾವೂ ಲಿಸ್ಟ್‌ನಲ್ಲಿದೆ. ಇವೆಲ್ಲದರ ನಡುವೆ ಮಹಿಳಾ ಪ್ರಧಾನ ಸಿನಿಮಾದಲ್ಲಿ ಅಭಿನಯಿಸಬೇಕೆಂಬ ಹಂಬಲವೂ ಮನಸ್ಸಲ್ಲಿದ್ದು, ಆ ಅವಕಾಶಕ್ಕಾಗಿ ಎದುರು ನೋಡುತ್ತಿದ್ದಾರೆ.

■ ಎಸ್ಸೆನ್

